1978ರ ಕರ್ನಾಟಕ ರಾಜ್ಯ ನಾಗರೀಕರ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

2007ರ ಕರ್ನಾಟಕ ಸಾಮಾನ್ಯ ಸೇವೆಗಳೂ (ಪದವಿ ಪೂರ್ವ ಶಿಕ್ಷಣ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 09.04.2007ರಂದು ಹೊರಡಿಸಲಾದ ಇಡಿ 72 ಡಿಜಿಓ 2001ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ.

4. ಅರ್ಜಿಯನ್ನೊಪ್ಪಿಸುವುದು

ಅಧ್ಯಕ್ಷರು: ಮಾನ್ಯ ಸದಸ್ಯರಾದ ಶ್ರೀ ಗಂಗಾಧರ ನಾಗೇಶ್‌ಭಟ್‌ರವರ, ಡಾ॥ ಚಂದ್ರಶೇಖರ ದಾಮ್ಲೆಯವರ ಸಂಪಾದಕತ್ವದಲ್ಲಿ ಹಂಪಿ ವಿಶ್ವವಿದ್ಯಾನಿಲಯ ದ್ವಿತೀಯ ಪಿ.ಯು.ಸಿ.ಯ ಸಮಾಜಶಾಸ್ತ್ರದ ಪಠ್ಯಪುಸ್ತಕದಲ್ಲಿ ಜಾತಿ ಪದ್ಧತಿಯ ಕುರಿತು ಸತ್ಯಕ್ಕೆ ದೂರವಾದ ಮಾತು ಉಲ್ಲೇಖಿಸಿರುವುದನ್ನು ಹಿಂತೆಗೆದುಕೊಳ್ಳುವ ಬಗೆಗಿನ ಅರ್ಜಿಯನ್ನು ಸಭೆಗೆ ಒಪ್ಪಿಸಲಾಗಿದೆ.

5. ಚುನಾವಣಾ ಪ್ರಸ್ತಾವ:

ವಿಷಯ: ಕರ್ನಾಟಕದ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸುವ ಬಗ್ಗೆ:–

ಶ್ರೀ ಬಸವರಾಜ ಎಸ್ ಹೊರಟ್ಟಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು (ಶ್ರೀ ಎಂ.ಪಿ. ಪ್ರಕಾಶ್ ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

(ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 265(1) ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೆಂಟು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ 271(1) ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಈ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 272(1)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾದ್ಯತೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಉ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 277(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಊ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 281(1)ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಋ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡಳಿಕೆಯ 283(1)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಎ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 286ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಏ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಐ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 370(2)ನೇ ನಿಯಮದ ಅನುಸಾರವಾಗಿ ಈ ಸಭೆ ಸದನ ಸಮಿತಿ (ವಸತಿ ಸೌಕರ್ಯಗಳ ಸಮಿತಿ)ಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಯಿತು.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ಅ) ವಿಷಯ: KIADB ಯಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, karnataka industrial Area Development Board ನಲ್ಲಿ ಆಗಿರುವ ಅವ್ಯವಹಾರಗಳಲ್ಲಿ ಕೆಲವನ್ನು